ವಿಜಯ ಕರ್ನಾಟಕ

Monday, July 18th, 2011

# ಫೈರ್ ಸೇಫ್ಟಿ ಪ್ರೋಗ್ರಾಂ ಕೋರ್ಸ್

ಅಗ್ನಿ ಅನಾಹುತದ ಸಾಧ್ಯತೆಗಳು ಔದ್ಯಮಿಕ ಹಾಗೂ ವಾಸಸ್ಥಳದ ಪರಿಧಿಗಳಲ್ಲಿ ಯಾವಾಗಲೂ ಇರುತ್ತವೆ. ಇತ್ತೀಚೆಗೆ ತೀವ್ರ ಗತಿಯಲ್ಲಿ ಹೆಚ್ಚುತ್ತಿರುವ ಔದ್ಯಮೀಕರಣದಿಂದಾಗಿ ಇಂಥ ಅಗ್ನಿ ಅನಾಹುತಗಳ ಸಂಖ್ಯೆ ಹೆಚ್ಚಾಗುತ್ತಿವೆ. ಕಾನೂನು ರೀತಿಯಿಂದಲೂ, ಮಾನವೀಯತೆಯ ದೃಷ್ಟಿಯಿಂದಲೂ ಹಾಗೂ ಸಾಮಾಜಿಕ ಬದ್ಧತೆಯಿಂದಲೂ ಅಗ್ನಿ ಅನಾಹುತಗಳು ಆಗದಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ. ಈ ಬಗೆಗಿನ ಶಾಸನಬದ್ಧ ನಡುವಳಿಕೆಗಳು ಎಂದಿಗಿಂತಲೂ ಹೆಚ್ಚು ಕಠಿಣಗೊಳ್ಳಲಿದೆ. ಅಗ್ನಿ ಆಕಸ್ಮಿಕಗಳಿಂದ ನಮ್ಮನ್ನು ಹಾಗೂ ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸಿಕೊಳ್ಳುವುದರ ಜೊತೆಗೆ, ದೇಶದ



ಸಂಪನ್ಮೂಲಗಳನ್ನು ಅಗ್ನಿ ಅನಾಹುತಗಳಿಂದ ರಕ್ಷಿಸಿಕೊಳ್ಳಬೇಕಾದುದು ಅತ್ಯವಶ್ಯ.

ಅಗ್ನಿ ಅನಾಹುತಗಳ ನಿವಾರಣೆ ಹಾಗೂ ಅಗ್ನಿಯಿಂದ ಸುರಕ್ಷವಾಗಿರುವುದರ ಬಗ್ಗೆ ತಿಳಿ ಹೇಳುವ, ಕ್ರಮಬದ್ಧವಾದ ವ್ಯಾಸಂಗ/ ಅಧ್ಯಯನ ನಡೆಸುವ ಕೋರ್ಸುಗಳ ಕೊರತೆಯನ್ನು ಮನಗಂಡ ಜೈನ್ ವಿಶ್ವವಿದ್ಯಾಲಯವು ತನ್ನ ಪ್ರಮುಖ ಕೇಂದ್ರವಾದ 'ಸೆಂಟರ್ ಫಾರ್ ಡಿಸಾಸ್ಟರ್ ಮಿಟಿಗೇಶನ್' ಮೂಲಕ ವಿನೂತನ ಡಿಪ್ಲೊಮಾ ತರಗತಿಯನ್ನು ಆರಂಭಿಸಿದೆ. ಯಾವುದೇ ಶಾಖೆಯ ಎಂಜಿನಿಯರಿಂಗ್ ಪದವಿಯನ್ನು ಪಡೆದಿರುವವರು ಈ ಸ್ನಾತಕೋತ್ತರ ಡಿಪ್ಲೊಮಾ ಪದವಿ ಕೋರ್ಸಿಗೆ ಸೇರ್ಪಡೆಯಾಗಬಹುದು. ಈ ಕೋರ್ಸಿನಲ್ಲಿ ವಿದ್ಯಾರ್ಥಿಗಳು ಅಗ್ನಿ ಅನಾಹುತಗಳ ಬಗೆ, ಅವುಗಳ ವಿರುದ್ಧ ತೆಗೆದುಕೊಳ್ಳಬೇಕಾದ ಸುರಕ್ಷಾ ಕ್ರಮಗಳು ಮತ್ತಿತರ ಸಂಬಂಧಪಟ್ಟ ವಿಷಯಗಳ ಬಗ್ಗೆ ಸಂಪೂರ್ಣ ತಿಳಿವಳಿಕೆ ನೀಡಲಾಗುತ್ತದೆ. ಅಗ್ನಿ ಹರಡುವಿಕೆಯ ತಾಂತ್ರಿಕ ಅಂಶಗಳು, ಅಗ್ನಿ ಅನಾಹುತಗಳ ಕಂಪ್ಯೂಟರ್ ಮಾದರಿಗಳ ವಿಶ್ಲೇಷಣೆಗಳು, ಪ್ರಾತ್ಯಕ್ಷಿಕೆಗಳು ಹಾಗೂ ನೇರ ಕ್ಷೇತ್ರಾನುಭವಗಳನ್ನೊಳಗೊಂಡ ಒಂದು ಪರಿಪೂರ್ಣ ಕೋರ್ಸ್ ಇದಾಗಿದೆ. ಅಗ್ನಿ ಅನಾಹುತ, ನಿವಾರಣೆ, ಸುರಕ್ಷೆಗಳ ಬಗೆಗಿನ ಎಲ್ಲ ಮಜಲುಗಳನ್ನೂ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವ ಕೋರ್ಸ್ ಇದಾಗಿದೆ.

ಈ ಕೋರ್ಸ್ ಆಗಸ್ಟ್ 17, 2011ರಿಂದ ಆರಂಭವಾಗಲಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ www.jainuniversity.ac.in/Admissions PG Diploma ಇಂಟರ್‌ನೆಟ್ ತಾಣವನ್ನು ವೀಕ್ಷಿಸಬಹುದು.

ಈ ಬಗ್ಗೆ ಹೆಚ್ಚಿನ ವಿವರಗಳನ್ನು ಕೇಂದ್ರದ ನಿರ್ದೇಶಕರಾದ ಡಾ|| ಆರ್.ಎನ್.ಐಯ್ಯಂಗಾರ್ ಅವರನ್ನು 9880030082 ದೂರವಾಣಿ ಸಂಖ್ಯೆ, ಅಥವಾ ಇ-ಮೇಲ್ ವಿಳಾಸ: aareni@yahoo.com ದ ಮೂಲಕ ಸಂಪರ್ಕಿಸಬಹುದು.